O.S. NO. 40/2022

PW -1 .

Dated 23-02-2026.

ಸಾಕ್ಷಿಯನ್ನು ಈ ದಿನ ದಿನಾಂಕ 23-02-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ 3, 6, 7 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ವಿ ಎಸ್ ವಕೀಲರಿಂದಃ

ಪ್ರಸ್ತುತ ದಾವೆ ಆಸ್ತಿ ಸಲುವಾಗಿ ಮಾಡಿದೆನೆ. ಪ್ರಸ್ತುತ ದಾವೆಯನು ಪ್ರತಿವಾದಿಗಳ ವಿರುದ್ಧ ವಾಟ್ನಿ ಕೊರಿ ಮಾಡಿದ್ದೆನೆ. ದಾವಾ ಆಸ್ತಿಗಳ ಹಳೆಯ ಉತಾರಗಳನು ನೊಡಿದಿರಾ ಅಂದರೆ ನೊಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲಿ ಪ್ರತಿವಾದಿಗಳ ಕ್ರಯ ಪತ್ರ ಒಪ್ಪಿ ಕೊಂಡಿರುತ್ತನೆ ಅಂದರೆ ಸರಿಯಲ್ಲ . ದಿಃ 21.02.1979 ರಂದು ಗಂಗಪ್ಪ ಬಸವಂತಪ್ಪ ನರಸನ್ನವರ ರವರು ಯಮನಪ್ಪ ತಿಗಡೊಳ್ಳಿ ರಿಂದ ರೂ 5,000/- ಗಳಿಗೆ ಆಸ್ತಿ ಖರೀದಿ ಮಾಡಿರುತ್ತಾರೆ ಅಂದರೆ ಸರಿಯಲ್ಲ . ಈ ಕುರಿತು ಖರಿದಿ ಪತ್ರ ನೋಂದ ಆಗಿದ್ದು ಅದನ್ನು ಪ್ರತಿವಾದಿಗಳು ಪ್ರಸ್ತುತ ದಾವೆಯಲ್ಲಿ ಹಾಜರ ಮಾಡಿರುತ್ತಾರೆ ಅಂದರೆ ಸಾಕ್ಷಿ ನಾನು ಸಹಿ ಮಾಡಿರುವದಿಲ್ಲ ಎಂದು ನುಡಿದಿರುತಾರೆ. ಖರೀದಿ ದಿನದಿಂದ ಗಂಗಪ್ಪ ಬಸವಂತಪ್ಪ ನರಸನ್ನವರ ಕಬ್ಜಾ ವಹಿವಾಟ ಮಾಡುತ್ತಾರೆ ಅಂದರೆ ಸಾಕ್ಷಿ ವಾಟ್ನಿ ಇನ್ನು ಆಗಿಲ್ಲ ಎಂದು ನುಡಿರುತ್ತಾರೆ . ಸದರಿ ಖರೀದಿ ಪತ್ರವನ್ನು ನಾನು 1979 ನೇ ಇಸವಿಯಿಂದ ಎಲ್ಲಿಯೂ ಪ್ರಶ್ನಿಸಿಲ್ಲ ಅಂದರೆ ಸರಿಯಲ್ಲ . ಖರೀದಿ ಪ್ರಕಾರ 2 ರಿಂದ 7 ನೇ ಪ್ರತಿವಾದಿಗಳು ಆಸ್ತಿಗಳ ಕಬ್ಜಾ ವಹಿವಾಟ ಮಾಡುತಿದ್ದರೂ ಸಹ ಅವರ ಆಸ್ತಿಯನ್ನು ಎತ್ತಿ ಹಾಕಬೇಕೆಂದು ಸುಳ್ಳು ದಾವೆ ಮಾಡಿದೆನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನದು ಯಾವುದೇ ಹಕ್ಕು ಹಿತಾಸಕ್ತಿ ಇರುವದಿಲ್ಲ ಅಂದರೆ ಸರಿಯಲ್ಲ . ದಾವಾ ಆಸ್ತಿಯನ್ನು ನನ್ನ ಕುಟುಂಬದವರು 1954 ರಲ್ಲಿ ಯಮನವ್ವ ಕಲ್ಲಪ್ಪ ತಿಗಡೊಳ್ಳಿ ಎಂಬುವರೆಗ ಖರೀದಿ ಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ . ಸದರಿ ಯಮನಪ್ಪ ಕಲ್ಲಪ್ಪ ತಿಗಡೊಳ್ಳಿ ಯವರು ತಾನು ಖರೀದಿ ಮಾಡಿದ ದಾವಾ ಆಸ್ತಿಯನ್ನು 2 ರಿಂದ 6 ಪ್ರತಿವಾದಿಗಳ ಮೂಲ ಪುರುಷನಾದ ಗಂಗಪ್ಪ ಬಸವಂತಪ್ಪ ನರಸನ್ನವರ ಎಂಬುವರಿಗೆ ಖರೀದಿ ಕೊಟ್ಟಿರುತ್ತಾರೆ ಅಂದರೆ ಸಾಕ್ಷಿ ಅದರಲ್ಲಿ ನನ್ನ ತಂದೆ, ನನ್ನ

O.S. NO. 40/2022

PW -1 .

Dated 23-02-2026.

ದೊಡ್ಡಪ್ಪ ಮತ್ತು ನನ್ನದು ಯಾರದು ಸಹಿ ಇರುವದಿಲ್ಲ ಎಂದು ನುಡಿಯುತ್ತಾರೆ . ದಾವಾ ಆಸ್ತಿಗೆ ನಾನು ಯಾವುದೇ ರೀತಿ ಸಂಬಂದ ಇಲ್ಲದಿದ್ದರೂ ಸಹ ಅದನು ಎತ್ತಿ ಹಾಕಬೇಕು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.